# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 357 (408)

ಮಾನ್ಯ ಸದಸ್ಯರುಗಳ ಹೆಸರು : ಶ್ರೀ ಪ್ರತಾಪ ಸಿಂಹ ನಾಯಕ್ ಕೆ.

(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 07.12.2023

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2006ರ ನಂತರದಲ್ಲಿ ನೇಮಕಗೊಂಡ ರಾಜ್ಯ ಸರ್ಕಾರಿ ನೌಕರರು, ಈ ಹಿಂದೆ ಇದ್ದ "ಹಳೆಯ ಪಿಂಚಣಿ ಯೋಜನೆ" ಯನ್ನು ಜಾರಿಗೊಳಿಸಲು ಸತತವಾಗಿ ಒತ್ತಾಯ ಮಾಡುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ಆರ್ಥಿಕ ಸಂಪನ್ಮೂಲ ಮತ್ತು ಆದಾಯಗಳ ಕ್ರೋಢೀಕರಣದ ದೃಷ್ಟಿಯಿಂದ ಕರ್ನಾಟಕ ರಾಜ್ಯಕ್ಕಿಂತ ಬಹಳ ಹಿಂದಿರುವ ದೇಶದಲ್ಲಿನ ಬಹುತೇಕ ರಾಜ್ಯಗಳು ಈಗಾಗಲೇ ತನ್ನ ಸರ್ಕಾರಿ ನೌಕರರಿಗೆ ಈ ಹಿಂದೆ ಇದ್ದ "ಹಳೆಯ ಪಿಂಚಣಿ ಯೋಜನೆ" ಯನ್ನು ಜಾರಿಗೊಳಿಸಿದ್ದು, ಕರ್ನಾಟಕ ಸರ್ಕಾರ ಇದುವರೆವಿಗೂ "ಹಳೆಯ ಪಿಂಚಣಿ ಯೋಜನೆ" ಯನ್ನು ಜಾರಿಗೊಳಿಸದಿರಲು ಯಾವುದಾದರೂ ಸಕಾರಣಗಳಿವೆಯೇ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/89/2023, ದಿನಾಂಕ: 01.03.2023ರಲ್ಲಿ ರಾಜ್ಯದಲ್ಲಿ ಜಾರಿ ಇರುವ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದು ಪಡಿಸುವ ಸಂಬಂಧ ಈಗಾಗಲೇ ಹಳೆ ಪಿಂಚಣಿ ಯೋಜನೆಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶಿಸಿದೆ. |
| ಇ) | ಆರ್ಥಿಕ ಪ್ರಗತಿ ಹಾಗೂ ಅಭಿವೃದ್ಧಿ ದೃಷ್ಟಿಯಲ್ಲಿ ದೇಶದ ಬಹುತೇಕ ರಾಜ್ಯಗಳಿಗಿಂತ ಸಾಕಷ್ಟು ಮುಂದಿರುವ ಕರ್ನಾಟಕ ರಾಜ್ಯ ತನ್ನ ಸರ್ಕಾರಿ ನೌಕರರಿಗೆ ಈ ಹಿಂದೆ ಇದ್ದ "ಹಳೆಯ ಪಿಂಚಣಿ ಯೋಜನೆ" ಯನ್ನು ಜಾರಿಗೊಳಿಸಲು ಈ ಕೂಡಲೇ ಕ್ರಮವಹಿಸುವುದೇ; | |
| ಈ | ಯಾವ ಕಾಲಮಿತಿಯೊಳಗೆ ಈ ಹಿಂದೆ ಇದ್ದ "ಹಳೆಯ ಪಿಂಚಣಿ ಯೋಜನೆ" ಯನ್ನು ಸರ್ಕಾರ ಜಾರಿಗೊಳಿಸುವುದು? | |

ಆಇ-ಪಿಇಎನ್/ 365 /2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ